ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು.

ಶ್ರೀ ಎಂ. ರಘುಪತಿ (ವಿದ್ಯಾಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

ಅಧ್ಯಕ್ಷರು.—ಸಭೆಯ ಮುಂದೆ ಲಿಖಿತ ಉತ್ತರಗಳನ್ನು ಇಡಲಾಗಿದೆ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎಂ. ರಘುಪತಿ (ವಿದ್ಯಾಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ವಾರ್ತಾ, ಯುವಜನ ಸೇವೆಗಳು, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಯವರ ಹೆಸರಿನಲ್ಲಿರುವ ಕಾಗದಪತ್ರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

1964ನೆಯ ಇಸವಿಯ ಕರ್ನಾಟಕ ಚಲನಚಿತ್ರ (ವಿಧಿನಿಯಮ) ಶಾಸನದ 22ನೆಯ ಕಲಂನ ಮೇರೆಗೆ ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯವರು ತಮ್ಮ ರಂಗಮಂದಿರದಲ್ಲಿ ಪ್ರದರ್ಶಿಸುವ 35 ಎಂ.ಎಂ. ಚಲನಚಿತ್ರ ಪ್ರದರ್ಶನಕ್ಕೆ ವಿನಾಯತಿ ನೀಡುವುದಕ್ಕೆ ಸಂಬಂಧಿಸಿದಂತೆ 1985ನೇ ಜುಲೈ 4ನೇ ದಿನಾಂಕದಂದು ಹೊರಡಿಸಿದ H.D.275 ಸಿ.ಎನ್.ಎ. 85ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುವುದು.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಮನವಿಗಳು

ವಿಷಯ : ಕುದುರೆಮೋತಿ ಮತ್ತು ತೆಲುಗು ಗಂಗಾ ಯೋಜನೆ ವಿಷಯಗಳನ್ನು ನಿಯಮ 68ರ ಪ್ರಕಾರ ಚರ್ಚೆಗೆ ತೆಗೆದುಕೊಳ್ಳುವುದರ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ (ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ತೆಲುಗು-ಗಂಗಾ ಮತ್ತು ಕುದುರೆಮೋತಿ ವಿಚಾರಗಳಿಗೆ ಸಂಬಂಧಪಟ್ಟಂತೆ ನಾನು ತಮಗೆ ಎರಡು ವಿಷಯಗಳನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ಕಳುಹಿಸಿಕೊಟ್ಟಿದ್ದೆ. ಆದರೆ ಅದನ್ನು ತಾವು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಿರುವುದಾಗಿ ತಿಳಿದುಬಂತು. ಇದನ್ನು ಪ್ರತ್ಯೇಕವಾಗಿ ಚರ್ಚೆಮಾಡಲು ತಾವು ಅವಕಾಶವನ್ನು ಕೊಡಬೇಕೆಂದು ನಾವು ಕೇಳಿದಾಗ ಅದಕ್ಕೆ ತಾವು ಒಪ್ಪಿಕೊಂಡಿದ್ದೀರಿ. ಅದರ ಪ್ರಕಾರ ನಾವು ತಮಗೆ ನೋಟೀಸ್ ಕೊಟ್ಟಿದ್ದೇವೆ.....

ಅಧ್ಯಕ್ಷರು.—ನಾಳೆ ಜನರಲ್ ಡಿಸ್ಕಷನ್ ಹೇಗೋ ಬರುತ್ತಿದೆ....

ಶ್ರೀ ಎಸ್. ಬಂಗಾರಪ್ಪ.—ಕುದುರೆಮೋತಿ ಪ್ರಕರಣದ ಚರ್ಚೆಯು ಮಹತ್ವ ಎಂಥಾದ್ದು ಎಂಬುದು ತಮಗೆ ಚೆನ್ನಾಗಿ ಗೊತ್ತಿದೆ...

ಅಧ್ಯಕ್ಷರು.—ಈಗಾಗಲೇ ಇದೇ ವಿಚಾರದಲ್ಲಿ ಮಾನ್ಯ ಆರ್. ವೆಂಕಟರಾಮಯ್ಯನವರು, ಮಾನ್ಯ ಟಿ. ಎಸ್. ಮಣಿ ಅವರು ಹಾಗೂ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರೂ ಗಮನ ಸೆಳೆಯುವ ಸೂಚನೆಯಾಗಿ ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ತಮ್ಮದನ್ನು ನಾನು ಗಮನ ಸೆಳೆಯುವ ಸೂಚನೆಯಾಗಿ ಕನ್‌ವರ್ಟ್ ಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಗಮನ ಸೆಳೆಯುವ ಸೂಚನೆಯಾಗಿ ಇದನ್ನು ಪರಿವರ್ತನೆ ಮಾಡಿದರೆ ಇದರ ವ್ಯಾಪ್ತಿ ಏನು ? ಇದರಲ್ಲಿ ಎಷ್ಟು ಚರ್ಚೆಮಾಡಬಹುದು ? ಎಂಬುದು ತಮಗೆ ಚೆನ್ನಾಗಿ ಗೊತ್ತಿದೆ....

ಅಧ್ಯಕ್ಷರು.—ನೀವು ಹೇಳಿದ ವಿಚಾರವನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಈ ವಿಷಯವನ್ನು ಗಮನ ಸೆಳೆಯುವ ಸೂಚನೆಯಾಗಿ ತೆಗೆದುಕೊಂಡರೆ, ಅದಕ್ಕೆ ಯಾರು ಯಾರು ಸದಸ್ಯರು ಸಹಿ ಹಾಕಿರುತ್ತಾರೆ ಅವರು ಮಾತ್ರ ಚರ್ಚೆಯಲ್ಲಿ ಭಾಗವಹಿಸಲು ಸಾಧ್ಯವಿದೆ, ಅಲ್ಲದೆ ಅದರಲ್ಲಿ ಹೆಚ್ಚಿನ ರೀತಿಯಲ್ಲಿ ಚರ್ಚೆಯನ್ನೂ ಕೂಡ ಮಾಡಲು ಬರುವುದಿಲ್ಲ. ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆದಿರುವುದರಿಂದ ಈ ಅನ್ಯಾಯವನ್ನು ಸಹಿಸಿಕೊಂಡು ನಾವು ಇಲ್ಲಿ ಸುಮ್ಮನೆ ಕೂತುಕೊಳ್ಳುವುದಕ್ಕಾಗುವುದಿಲ್ಲ. ಅದೇರೀತಿ ತೆಲುಗು-ಗಂಗಾ ವಿಚಾರದಲ್ಲೂ ಆಯ್ತು....

ಅಧ್ಯಕ್ಷರು.—ತಮ್ಮ ವಿಷಯವನ್ನು ಸ್ಪೆಷಲ್ ಕೇಸ್ ಆಗಿ ಪರಿಗಣಿಸಿ ಚರ್ಚೆಗೆ ಅವಕಾಶ ಕೊಡುತ್ತೇನೆ.